# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 08.04.2022 ರಂದು ಬೆಳಿಗ್ಗೆ: 11:00 ಗಂಟೆಗೆ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2021–22ನೇ ಸಾಲಿನ ಮೂರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಜಿ. ಸುದರ್ಶನ ರೆಡ್ಡಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಜಿ. ಸುದರ್ಶನ ರೆಡ್ಡಿ,<br>ಡೀನರು, ವಾಣಿಜ್ಯ ಮತ್ತು ನಿರ್ವಹಣೆ ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು, ತುಮಕೂರು ಜಿ.–572137. | ಸದಸ್ಯರು |
| 4. | ಶ್ರೀಮತಿ ಲತಾ ಬಿ.ಎಸ್<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 5. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ | ಸದಸ್ಯರು |
| 6. | ಡಾ. ಟಿ. ವೆಂಕಟಾಚಲಯ್ಯ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ)<br>ತುಮಕೂರು ಜಿಲ್ಲೆ. | ಸದಸ್ಯರು |
| 7. | ಡಾ. ಕೆ ಸಿ ಜಯಸ್ವಾಮಿ<br>ಪ್ರಾಂಶುಪಾಲರು, ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು<br>ಬಿ.ಹೆಚ್ ರಸ್ತೆ, ತುಮಕೂರು | ಸದಸ್ಯರು |
| 8. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು–572102. | ಸದಸ್ಯರು |
| 9. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009. | ಸದಸ್ಯರು |
| 10. | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, ಬೆಂಗಳೂರು–560072. | ಸದಸ್ಯರು |
| 11. | ಶ್ರೀ ಧಾಬು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು–572201. ತುಮಕೂರು ಜಿಲ್ಲೆ. | ಸದಸ್ಯರು |
| 12. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು–572105. | ಸದಸ್ಯರು |
| 13. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 15. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

| ಆನ್‌ಲೈನ್ ಮುಖಾಂತರ ಹಾಜರಾದ ಸದಸ್ಯರು | | |
|---|---|---|
| 1 | ಶ್ರೀಮತಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು–560094. | ಸದಸ್ಯರು |

<u>ಹಾಜರಾಗದ ಸದಸ್ಯರು</u>

| | | |
|---|---|---|
| 1 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6 | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>ಬೆಂಗಳೂರು-560064. | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:08.04.2022 ಶುಕ್ರವಾರ ಬೆಳಗ್ಗೆ 11:00 ಕ್ಕೆ ನಡೆದ 2021-22ನೇ ಸಾಲಿನ ಮೂರನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಮಾನ್ಯ ಕುಲಸಚಿವರು ಕಾರ್ಯಸೂಚಿಗಳ ಮಂಡಿಸಿ, ಈ ಬಗ್ಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರಮ ಸಂಖ್ಯೆ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 28.01.2022ರಂದು ನಡೆದ ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ.<br>• ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳ ಭತ್ಯೆಗಳ ಕುರಿತು ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು ಅನುಸರಿಸುತ್ತಿರುವ ಕ್ರಮದ ಕುರಿತು ಮಾಹಿತಿಯನ್ನು ಪಡೆದು ಎರಡು ವಿಶ್ವವಿದ್ಯಾನಿಲಯಗಳ ಪೈಕಿ ಯಾವುದಾದರೂ ಒಂದು ವಿಶ್ವವಿದ್ಯಾನಿಲಯದ ನಿಯಮವನ್ನು ಅಳವಡಿಸಿಕೊಂಡು ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳ ಭತ್ಯೆಯನ್ನು ನಿಗದಿಪಡಿಸುವಂತೆ ಸಭೆಯು ತೀರ್ಮಾನಿಸಿತು.<br>• ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ಕುಂದುಕೊರತೆಗಳ ಸಂಬಂಧ ತುರ್ತಾಗಿ ಸಭೆ ಕರೆದು ಮಾಹಿತಿಯನ್ನು ಪಡೆದು ಈ ಕುರಿತು ರಚಿತಗೊಂಡಿರುವ ಸಮಿತಿಗೆ ವರದಿಯನ್ನು ನೀಡುವಂತೆ ಸಭೆಯು ನಿರ್ಣಯಿಸಿತು.<br>• ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಮುಂಬರುವ ಸಿಂಡಿಕೇಟ್‌ಗೆ ಮಂಡಿಸಲು ಸಭೆಯು ತೀರ್ಮಾನಿಸಿತು.<br>• ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗಗಳ ಪರಿನಿಯಮಾವಳಿಗಳನ್ನು ರಚಿಸುವ ಸಂಬಂಧ ಹಿರಿಯ ಡೀನರ ನೇತೃತ್ವದಲ್ಲಿ ಶ್ರೀ ಪ್ರಸನ್ನಕುಮಾರ್, ಡಾ. ಕೆ.ಸಿ. ಸುರೇಶ್, ಡಾ. ರೂಪೇಶ್‌ಕುಮಾರ್ ಎ. - ಸಂಚಾಲಕರು ಇವರುಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು. | | | |
| ಖರೀದಿ ಕೋಶ | | | |
| 1. | 2021-22.ಸಾ.ಸಿಂ.03<br>ಖ.ಕೋ-01 | ತುಮಕೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳು ದಿನಸಿ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ವಾರ್ಷಿಕ ದರ ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳು ದಿನಸಿ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ವಾರ್ಷಿಕ ದರ ಒಪ್ಪಂದ |

| | | | |
|---|---|---|---|
| | | | ಮಾಡಿಕೊಂಡಿರುವ ಶ್ರೀ ಸಿ.ಜೆ. ನಾಗರಾಜ (ಮೆ. ಕುಮಾರರಾಮ ಎಂಟರ್‌ಪ್ರೈಸಸ್), ತುಮಕೂರು ಇವರೊಂದಿಗೆ ವಿಶ್ವವಿದ್ಯಾನಿಲಯವು ವಾರ್ಷಿಕ ದರ ಕರಾರು ಒಪ್ಪಂದದಂತೆ ದಿನಾಂಕ 01.02.2022 ರಿಂದ ದಿನಾಂಕ 31.01.2023ರವರೆಗೆ ಅಥವಾ ಟೆಂಡರ್ ಅವಧಿ ಮುಕ್ತಾಯಗೊಂಡು ಪರ್ಯಾಯ ವ್ಯವಸ್ಥೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯವು ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 2. | 2021–22.ಸಾ.ಸಿಂ.03<br>ಖ.ಕೋ–02 | ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ Konica Minolta Multifunction Machines ನ್ನು GEM Portal ಮೂಲಕ ಖರೀದಿ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ Konica Minolta Multifunction Machines ನ್ನು GEM Portal ಮೂಲಕ M/s GALAXY IMAGING TECHNOLOGIE, Bangalore ಇವರಿಂದ ಖರೀದಿ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 3. | 2021–22.ಸಾ.ಸಿಂ.03<br>ಖ.ಕೋ–03 | ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ Lipi Data Systems 1 Cabinet (Lipi 6815L) Machine ನ್ನು GEM Portal ಮೂಲಕ ಖರೀದಿ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ Lipi Data Systems 1 Cabinet (Lipi 6815L) Machine ನ್ನು GEM Portal ಮೂಲಕ M/s Tejashwini Solutions, Bangalore ಇವರಿಂದ ಖರೀದಿ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.<br>ಮುಂದುವರೆದು ಸದರಿ ಸಂಸ್ಥೆಯವರು ಪಾವತಿಗಾಗಿ ಬಿಲ್ಲನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 4. | 2021–22.ಸಾ.ಸಿಂ.03<br>ಖ.ಕೋ–04 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಾಗೂ ಸ್ನಾತಕ ವಿಭಾಗಗಳಿಗೆ 2021–22ನೇ ಸಾಲಿಗೆ ರಾಸಾಯನಿಕಗಳು, ಗ್ಲಾಸ್‌ವೇರ್ಸ್, ಪ್ಲಾಸ್ಟಿಕ್‌ವೇರ್, ಫಿಲ್ಟರ್ ಪೇಪರ್ ಮತ್ತು ಇತರೆ ವಸ್ತುಗಳನ್ನು ಸರಬರಾಜು ಪಡೆಯಲು ವಾರ್ಷಿಕ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಾಗೂ ಸ್ನಾತಕ ವಿಭಾಗಗಳಿಗೆ 2021–22ನೇ ಸಾಲಿಗೆ ರಾಸಾಯನಿಕಗಳು, ಗ್ಲಾಸ್‌ವೇರ್ಸ್, ಪ್ಲಾಸ್ಟಿಕ್‌ವೇರ್, ಫಿಲ್ಟರ್ ಪೇಪರ್ ಮತ್ತು ಇತರೆ ವಸ್ತುಗಳನ್ನು ಸರಬರಾಜು ಪಡೆಯಲು ಪ್ರಸ್ತುತ 1) ಮೆ. ಸುಧಾ ಟ್ರೇಡರ್ಸ್, ಶಿವಮೊಗ್ಗ, 2) ಮೆ. ದ |



08/4/22

| | | | |
|---|---|---|---|
| | | | ಇಂಡಸ್ಟ್ರಿಯಲ್ ಲ್ಯಾಬೊರೇಟರಿ ಇಕ್ಯೂಪ್‌ಮೆಂಟ್ ಕಂಪನಿ, ಮೈಸೂರು, 3) ಮೆ. ಕೆಮಿಕಲ್ ಹೌಸ್, ಬೆಂಗಳೂರು ಇವರೊಂದಿಗೆ ದಿನಾಂಕ:21.12.2021 ರಿಂದ ದಿನಾಂಕ:20.12.2022 ರವರೆಗೆ ಮಾಡಿಕೊಂಡಿರುವ ವಾರ್ಷಿಕ ದರ ಕರಾರು ಒಪ್ಪಂದದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. ಹಾಗೂ 4) ಮೆ. ಜೆನಿಟಿಕ್ಸ್ ಬಯೋಟೆಕ್ ಏಷಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರೊಂದಿಗೆ ದಿನಾಂಕ 21.12.2021 ರಿಂದ ದಿನಾಂಕ:20.12.2022 ರವರೆಗೆ ಮಾಡಿಕೊಂಡಿರುವ ವಾರ್ಷಿಕ ದರ ಕರಾರು ಒಪ್ಪಂದದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 5. | 2021–22.ಸಾ.ಸಿಂ.03<br>ಖ.ಕೋ–05 | ತುಮಕೂರು ವಿಶ್ವವಿದ್ಯಾನಿಲಯದ ಸಿರಾ ಸ್ನಾತಕೋತ್ತರ ಕೇಂದ್ರಕ್ಕೆ ಅವಶ್ಯವಿರುವ ಉಪಕರಣ/ಪೀಠೋಪಕರಣ/ಸಲಕರಣೆಗಳನ್ನು ಸರಬರಾಜು ಪಡೆಯಲು ಜೆಮ್ (GeM) ಮುಖಾಂತರ ಸರಬರಾಜು ಆದೇಶ ನೀಡಿರುವ ಕ್ರಮಗಳನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಸಿರಾ ಸ್ನಾತಕೋತ್ತರ ಕೇಂದ್ರಕ್ಕೆ ಅವಶ್ಯವಿರುವ ಉಪಕರಣ/ ಪೀಠೋಪಕರಣ/ ಸಲಕರಣೆಗಳನ್ನು ಸರಬರಾಜು ಪಡೆಯಲು ಜೆಮ್ (GeM) ಮುಖಾಂತರ ಕ್ರಮ ಕೈಗೊಂಡು M/s Tejashwini Solutions, Bangalore ಇವರಿಗೆ ಸರಬರಾಜು ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.<br>ಮುಂದುವರೆದು, ಪಾವತಿ ಸಂಬಂಧ ಸರಬರಾಜಾಗಿರುವ ಉಪಕರಣಗಳ ಪರಿಶೀಲನೆಗಾಗಿ ಖರೀದಿ ಸಮಿತಿಗೆ ಪರಿಶೀಲಿಸುವಂತೆ ತಿಳಿಸಿ ಸಮಿತಿ ನೀಡುವ ವರದಿಯನ್ವಯ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 6. | 2021–22.ಸಾ.ಸಿಂ.03<br>ಖ.ಕೋ–06 | ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅವಶ್ಯವಿರುವ Spectrofluorimeter ಉಪಕರಣದ Lamp ಅನ್ನು ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿರುವ ಕುರಿತು | ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅವಶ್ಯವಿರುವ Spectrofluorimeter ಉಪಕರಣದ Lamp ಅನ್ನು ಖರೀದಿಸಲು ಅಂದಾಜು ಮೊತ್ತ ರೂ.1.50 ಲಕ್ಷಗಳಿದ್ದು, ಅವಶ್ಯವಿದ್ದಲ್ಲಿ ಮುಂಗಡ ಹಣ ಪಾವತಿಸಿ ಉಪಕರಣವನ್ನು ಪಡೆದು ಗುಣಮಟ್ಟವನ್ನು ಪರಿಶೀಲಿಸಿ, ತೃಪ್ತಿಕರವಾಗಿ ಕಂಡುಬರದಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |

| | | | |
|---|---|---|---|
| **ಸಿಬ್ಬಂದಿ ವಿಭಾಗ** | | | |
| 7. | 2021-22.ಸಾ.ಸಿಂ.03 ಸಿ.ವಿ-01 | ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಪ್ರಭಾರ ಪ್ರಾಂಶುಪಾಲರ ಬದಲಾವಣೆಗೆ ಸಂಬಂಧಿಸಿದಂತೆ ಬೋಧಕ ಸಿಬ್ಬಂದಿಗಳು ಸಲ್ಲಿಸಿರುವ ಮನವಿಯ ಕುರಿತು Enrich programme ಸಮಿತಿಯ ವಿಚಾರಣೆಯ ವರದಿ ಕುರಿತು | ಸಮಿತಿಯು ನೀಡಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ವರದಿಯ ಶಿಫಾರಸ್ಸಿನನ್ವಯ ಪ್ರಾಂಶುಪಾಲರ ಬದಲಾವಣೆಯನ್ನು ಮೂರು ವರ್ಷಗಳ ಅವಧಿಗೆ ರೊಟೇಷನ್ ಆಧಾರದ ಮೇಲೆ ನೇಮಕ ಮಾಡುವ ಕುರಿತು ಇಂದಿನಿಂದಲೇ ಜಾರಿಗೆ ಬರುವಂತೆ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಎರಡು ಘಟಕ ಕಾಲೇಜುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಹಾಗೂ ವಿದ್ಯಾರ್ಥಿಗಳ ಸಮವಸ್ತ್ರಗಳ ಕುರಿತು ಹಾಗೂ ಇನ್ನಿತರೆ ವಿಚಾರಗಳಿಗೆ ಸಂಬಂಧಿಸಿದಂತೆ ಸಭೆಯನ್ನು ನಡೆಸಿ, ವರದಿಯನ್ನು ಸಲ್ಲಿಸಲು Enrich programme ಸಮಿತಿಗೆ ತಿಳಿಸಲು ಸಭೆಯು ತೀರ್ಮಾನಿಸಿತು.<br>ಪ್ರಾಂಶುಪಾಲರು ಮತ್ತು ಡಾ. ಪಾಲಾಕ್ಷಮೂರ್ತಿ ಮತ್ತು ಡಾ. ಮಂಜುನಾಥ ಇವರುಗಳ ದೂರುಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ Enrich programme ಸಮಿತಿಯ ವರದಿಯನ್ನು ಪರಿಶೀಲಿಸಿದ ಸಭೆಯು ಈ ವಿಷಯವನ್ನು ಕೈಬಿಡುವಂತೆ ಸಭೆಯು ತೀರ್ಮಾನಿಸಿತು. |
| 8. | 2021-22.ಸಾ.ಸಿಂ.03 ಸಿ.ವಿ-02 | ಶ್ರೀ ಹೊನ್ನೇಶಪ್ಪ ಎಸ್ ಆರ್., ದ್ವಿತೀಯ ದರ್ಜೆ ಸಹಾಯಕರು (ಹಂ.ಸಂ.ವೇ.ನೌ) ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಇವರು ಡಾ. ಪಾಲಾಕ್ಷಮೂರ್ತಿ ಬಿ. ಎಸ್, ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಇವರ ವಿರುದ್ಧ ನೀಡಲಾದ ದೂರಿನ ವಿಚಾರಣೆ ಸಂಬಂಧ Enrich programme ಸಮಿತಿಯು ಸಲ್ಲಿಸಿರುವ ನಡಾವಳಿ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು Enrich programme ಸಮಿತಿಯು ನೀಡಿರುವ ಸೂಚನೆಯಂತೆ ಅಗತ್ಯ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಹಣಕಾಸು ವಿಭಾಗ** | | | |
| 9. | 2021-22.ಸಾ.ಸಿಂ.03 ಹ.ವಿ-01 | 2021-22ನೇ ಸಾಲಿನ ವ್ಯವಹಾರಿಕ ಆಯವ್ಯಯದ ಪರೀಕ್ಷಾ ವೆಚ್ಚದ ಲೆಕ್ಕ ಶೀರ್ಷಿಕೆಯಡಿಯಲ್ಲಿ ವೆಚ್ಚವಾಗಿರುವ ಹೆಚ್ಚುವರಿ ಮೊತ್ತವನ್ನು ಘಟನೋತ್ತರವಾಗಿ ಅನುಮೋದಿಸುವ ಹಾಗೂ ಹೆಚ್ಚುವರಿ ಮೊತ್ತವನ್ನು ಮೀಸಲಿರಿಸುವ ಬಗ್ಗೆ. | ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು "2021-22ನೇ ಸಾಲಿನ ವ್ಯವಹಾರಿಕ ಆಯವ್ಯಯದ ಪರೀಕ್ಷಾ ವೆಚ್ಚದ ಲೆಕ್ಕಶೀರ್ಷಿಕೆಯಡಿಯಲ್ಲಿ ವೆಚ್ಚವಾಗಿರುವ ಮೊತ್ತ ರೂ.98.12 ಲಕ್ಷಗಳಿಗೆ ಘಟನೋತ್ತರವಾಗಿ ಅನುಮೋದಿಸಿ ಹಾಗೂ ಸದರಿ ಸಾಲಿಗೆ ಅವಶ್ಯವಿರುವ ಹೆಚ್ಚುವರಿ ಮೊತ್ತ ರೂ.90.00 ಲಕ್ಷಗಳ ಪ್ರಸ್ತಾವನೆಯನ್ನು ಅನುಮೋದಿಸಿರುವ" ಹಣಕಾಸು ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 10. | 2021-22.ಸಾ.ಸಿಂ.03 ಹ.ವಿ-02 | ವಿಶ್ವವಿದ್ಯಾನಿಲಯದ ಬೋಧಕ/ ಬೋಧಕೇತರ ಸಿಬ್ಬಂದಿಗಳ ವೇತನಕ್ಕೆ ಸಂಬಂಧಿಸಿದ ಕಟಾವಣೆಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಪಾವತಿಸಿ ಮರುಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ. | ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ಸಿಬ್ಬಂದಿಗಳ ವೇತನಕ್ಕೆ ಸಂಬಂಧಿಸಿದ ಕಟಾವಣೆಗಳನ್ನು ಸಿಬ್ಬಂದಿಗಳ ಆರ್ಥಿಕ |



8/4/22 08/4/22

| | | | |
|---|---|---|---|
| | | | ಸುರಕ್ಷತೆ ಮತ್ತು ಸಕಾಲದಲ್ಲಿ ಕಟಾವಣೆ ಮೊತ್ತಗಳನ್ನು ಇತ್ಯರ್ಥಪಡಿಸುವ ಹಿತದೃಷ್ಟಿ ಮತ್ತು ಸದುದ್ದೇಶದಿಂದ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಕಟಾವಣೆ ಮೊತ್ತಗಳನ್ನು ಪಾವತಿಸಿ ನಂತರ ಸರ್ಕಾರದಿಂದ ಸ್ವೀಕೃತವಾಗುವ ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಅನುಮೋದಿಸಿರುವ" ಹಣಕಾಸು ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 11. | 2021-22.ಸಾ.ಸಿಂ.03 ಹ.ವಿ-03 | ಸನ್ನದು ಲೆಕ್ಕ ಪರಿಶೋಧಕರಿಂದ ಸಿದ್ಧಪಡಿಸಲಾದ 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸುವ ಕುರಿತು. | ಸನ್ನದು ಲೆಕ್ಕಪರಿಶೋಧಕರಿಂದ ಸಿದ್ದಪಡಿಸಲಾದ 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸಿರುವ ಹಣಕಾಸು ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | **ಕ್ರೀಡಾ ವಿಭಾಗ** | |
| 12. | 2021-22.ಸಾ.ಸಿಂ.03 ಕ್ರೀ.ವಿ.-01 | 2021-22ನೇ ಸಾಲಿನ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಮಹಿಳಾ ಅಥ್ಲೆಟಿಕ್ಸ್ ಮತ್ತು ಮಹಿಳಾ ಹ್ಯಾಂಡ್ ಬಾಲ್ ಸ್ಪರ್ಧೆಗಳಲ್ಲಿ ಭಾಗವಹಿಸಲು ಮುಂಗಡ ಹಣ ಮಂಜೂರಾತಿ ಕುರಿತು | 2021-22ನೇ ಸಾಲಿನ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಮಹಿಳಾ ಅಥ್ಲೆಟಿಕ್ಸ್ ಮತ್ತು ಮಹಿಳಾ ಹ್ಯಾಂಡ್ ಬಾಲ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತರಬೇತುದಾರರು/ವ್ಯವಸ್ಥಾಪಕರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಇತರೆ ವೆಚ್ಚಗಳಿಗಾಗಿ ಒಟ್ಟು ರೂ.1,02,500/- (ಒಂದು ಲಕ್ಷದ ಎರಡು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ಗಳನ್ನು ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಮುಂಗಡವಾಗಿ ಹಣ ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>ಮುಂದುವರೆದು, ವಿಶೇಷ ಕ್ರೀಡಾ ಸಾಧಕರಿಗೆ ಉತ್ತೇಜನ ನೀಡುವಲ್ಲಿ ಹೆಚ್ಚಿನ ಪ್ರೋತ್ಸಾಹ ಧನ ನೀಡಲು ಸಭೆಯು ಸಲಹೆ ನೀಡಿತು. |
| | | **ಇಂಜಿನಿಯರಿಂಗ್ ವಿಭಾಗ** | |
| 13 | 2021-22.ಸಾ.ಸಿಂ.03 ಇಂ.ವಿ.-01 | ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿಗೆ ಬಣ್ಣ ಬಳಿಯುವುದು ಹಾಗೂ ಇನ್ನಿತರ ವಿಶೇಷ ದುರಸ್ಥಿ ಕೆಲಸಗಳನ್ನು ನಿರ್ವಹಿಸಲು ರೂ. 34.00 ಲಕ್ಷ (ರೂಪಾಯಿ ಮೂವತ್ತ ನಾಲ್ಕು ಲಕ್ಷಗಳು ಮಾತ್ರ) ಗಳ ಅಂದಾಜು ಮೊತ್ತದ ಕಾಮಗಾರಿಯ ಟೆಂಡರ್ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿಗೆ ಸದ್ಯದಲ್ಲೇ ನ್ಯಾಕ್ ಸಮಿತಿಯ ಭೇಟಿ ನೀಡುತ್ತಿರುವುದರಿಂದ ಸದರಿ ಕಾಲೇಜಿಗೆ ಬಣ್ಣ ಬಳಿಯುವುದು ಹಾಗೂ ಇನ್ನಿತರ ವಿಶೇಷ ದುರಸ್ಥಿ ಕೆಲಸಗಳನ್ನು ತುರ್ತಾಗಿ ಕೆಲಸ ನಿರ್ವಹಿಸಬೇಕಾಗಿರು-ವುದರಿಂದ ಅಂದಾಜು ಮೊತ್ತ ರೂ. 34.00 ಲಕ್ಷ (ಮೂವತ್ತ ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ |

| | | | |
|---|---|---|---|
| | | | ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | ಸಿಬ್ಬಂದಿ ವಿಭಾಗ | |
| 14 | 2021–22.ಸಾ.ಸಿಂ.03 ಸಿ.ವಿ–03 | ಸಹಾಯಕ ಪ್ರಾಧ್ಯಾಪಕರು ಹಾಗೂ ತತ್ಸಮಾನ ವೃಂದದ ಶೈಕ್ಷಣಿಕ ಸಿಬ್ಬಂದಿಗಳಿಗೆ ಯು.ಜಿ.ಸಿ–ಸಿ.ಎ.ಎಸ್ ಅಡಿಯಲ್ಲಿ **Academic Level 10** ರಿಂದ **Academic Level 11** ಹಾಗೂ **Academic Level 11** ರಿಂದ **Academic Level 12** ಕ್ಕೆ ಪದೋನ್ನತಿ ನೀಡುವ ಕುರಿತು. | ಸಹಾಯಕ ಪ್ರಾಧ್ಯಾಪಕರುಗಳಿಗೆ ಹಾಗೂ ತತ್ಸಮಾನ ವೃಂದದ ಶೈಕ್ಷಣಿಕ ಸಿಬ್ಬಂದಿಗಳಿಗೆ ಯು.ಜಿ.ಸಿ–ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಈ ಹಿಂದೆ ಅನುಸರಿಸಿರುವ ಕ್ರಮದಂತೆ ಹಾಗೂ ಸರ್ಕಾರದ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 15 | 2021–22.ಸಾ.ಸಿಂ.03 ಸಿ.ವಿ–04 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿಗೆ ಅವಕಾಶವಿಲ್ಲದ ತಾಂತ್ರಿಕ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಹುದ್ದೆಗಳನ್ನು ಸೃಜಿಸುವ ಸಂಬಂಧದ ಪರಿನಿಯಮದ ಕುರಿತು | "ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿಗೆ ಅವಕಾಶವಿಲ್ಲದ ತಾಂತ್ರಿಕ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಹುದ್ದೆಗಳನ್ನು ಸೃಜಿಸುವ ಸಂಬಂಧದದ ಪರಿನಿಯಮವನ್ನು ಪರಿಶೀಲಿಸಿದ ಸಭೆಯು Library Assistant ಮತ್ತು Laboratory Assistant ಹುದ್ದೆಗಳಿಗೆ ಸಂಬಂಧಿಸಿದಂತೆ ಹುದ್ದೆಗಳ ಮಂಜೂರಾತಿ, ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಸದರಿ ಹುದ್ದೆಗಳಿಗಿರುವ ಪದೋನ್ನತಿ ಮತ್ತು ವೇತನ ಶ್ರೇಣಿಯ ಮಾಹಿತಿಗಳನ್ನು ತುಮಕೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿ ಮಂಜೂರಾಗಿರುವಂತೆ ವಿವರಗಳ ಕೋಷ್ಟಕವನ್ನು ಸಿದ್ದಪಡಿಸಿ ಮುಂದಿನ ಹಣಕಾಸು ಸಮಿತಿ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳಿಗೆ ಮಂಡಿಸುವಂತೆ ನಿರ್ಣಯಿಸಿರುವ" ಹಿನ್ನಲೆಯಲ್ಲಿ ಹಣಕಾಸು ಸಮಿತಿಯು ಕೈಗೊಂಡಿರುವ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | ಪರೀಕ್ಷಾ ವಿಭಾಗ | |
| 16 | 2021–22.ಸಾ.ಸಿಂ.03 ಪ.ವಿ–01 | ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡವಳಿಯ ಕುರಿತು | ವಿವಿಧ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪರೀಕ್ಷಾ ಅಕ್ರಮ ಚಟುವಟಿಕೆಗಳ ಕುರಿತು ವಿಚಾರಣಾ ಸಮಿತಿಯು ಸಲ್ಲಿಸಿರುವ ನಡಾವಳಿಯನ್ನು ಪರಿಶೀಲಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸಮಿತಿಯ ನಡಾವಳಿಯ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

Sd/- 8/4/22 08/4/22

| | | | |
|---|---|---|---|
| | | ಖರೀದಿ ಕೋಶ | |
| 17 | 2021–22.ಸಾ.ಸಿಂ.03<br>ಖ.ಕೋ–07 | ತುಮಕೂರು ವಿಶ್ವವಿದ್ಯಾನಿಲಯದ 15ನೇ ವಾರ್ಷಿಕ ಘಟಿಕೋತ್ಸವಕ್ಕೆ ಸುವರ್ಣಲೇಪಿತ ಬೆಳ್ಳಿ ಪದಕಗಳನ್ನು ಸರಬರಾಜು ಪಡೆಯಲು ಮರು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ 15ನೇ ವಾರ್ಷಿಕ ಘಟಿಕೋತ್ಸವಕ್ಕೆ ಸುವರ್ಣಲೇಪಿತ ಬೆಳ್ಳಿ ಪದಕಗಳನ್ನು ಸರಬರಾಜು ಪಡೆಯುವ ಸಂಬಂಧ ಚರ್ಚಿಸಿದ ಸಭೆಯು ಮರು ಟೆಂಡರ್‌ನಲ್ಲಿಯೂ ಬಿಡ್‌ದಾರರು ಒಬ್ಬರೇ ಆಗಿದ್ದು, ಸದರಿ ಟೆಂಡರ್ ಅನ್ನು ಟೆಂಡರ್ ಸಮಿತಿಯ ಮುಂದೆ ತಂದು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| | | ಪರೀಕ್ಷಾ ವಿಭಾಗ | |
| 18 | 2021–22.ಸಾ.ಸಿಂ.03<br>ಪ.ವಿ–02 | ವಿಶ್ವವಿದ್ಯಾನಿಲಯದ ಪರೀಕ್ಷಾ ಮಾರ್ಗಸೂಚಿ ಮತ್ತು ಪರಿನಿಯಮಗಳನ್ನೊಳಗೊಂಡ ಕೈಪಿಡಿಯನ್ನು ಅನುಷ್ಠಾನಗೊಳಿಸಿ ರಚಿಸಿರುವ ಕುರಿತು. | ವಿಶ್ವವಿದ್ಯಾನಿಲಯದ ಪರೀಕ್ಷಾ ಮಾರ್ಗಸೂಚಿ ಮತ್ತು ಪರಿನಿಯಮಗಳನ್ನು ಒಳಗೊಂಡ ಕೈಪಿಡಿಯನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಿರುವ ಕೈಪಿಡಿಯನ್ನು ಸರ್ಕಾರವು ಸಿಂಡಿಕೇಟ್ ನಿರ್ಣಯದೊಂದಿಗೆ, ಮರು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಪರೀಕ್ಷಾ ಮಾರ್ಗಸೂಚಿ ಮತ್ತು ಪರಿನಿಯಮವಳಿಯ ಕೈಪಿಡಿಯನ್ನು ಪರಿಶೀಲಿಸಿದ ಸಭೆಯು ಸರ್ಕಾರಕ್ಕೆ ತುರ್ತಾಗಿ ಮರುಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | ಸಿಬ್ಬಂದಿ ವಿಭಾಗ | |
| 19 | 2021–22.ಸಾ.ಸಿಂ.03<br>ಸಿ.ವಿ–05 | ಡಾ. ರಮೇಶ್ ಎಸ್. ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರು ಕನಿಷ್ಠ ಸೇವಾವಧಿ ಪೂರೈಸಿದ ದಿನಾಂಕದಿಂದ ಅನ್ವಯವಾಗುವಂತೆ ಪದೋನ್ನತಿ ನೀಡಲು ಕೋರಿರುವ ಕುರಿತು | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಡಾ. ರಮೇಶ್ ಎಸ್. ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಇವರ ಪದೋನ್ನತಿ ಸಂಬಂಧ ಕನಿಷ್ಠ ಸೇವಾವಧಿ ಪೂರೈಸಿದ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಪದೋನ್ನತಿ ನೀಡಲು ಸಭೆಯು ನಿರ್ಣಯಿಸಿತು. |
| | | ಕ್ರೀಡಾ ವಿಭಾಗ | |
| 20 | 2021–22.ಸಾ.ಸಿಂ.03<br>ಕ್ರೀ.ವಿ.–02 | 2021–22ನೇ ಸಾಲಿನ ಅಂತರ ಕಾಲೇಜು ಕ್ರೀಡೆಗಳ ಸ್ಪರ್ಧೆ ಹಾಗೂ ಆಯ್ಕೆ ಪ್ರಕ್ರಿಯೆಗೆ ಭಾಗವಹಿಸಲು ಮುಂಗಡ ಹಣ ಮಂಜೂರಾತಿ ಕುರಿತು. | 2021–22ನೇ ಸಾಲಿನ ಅಂತರ ಕಾಲೇಜು ಕ್ರೀಡೆಗಳ ಸ್ಪರ್ಧೆ ಹಾಗೂ ಆಯ್ಕೆ ಪ್ರಕ್ರಿಯೆಗೆ ಭಾಗವಹಿಸಲು ಮುಂಗಡ ಹಣ ಮಂಜೂರಾತಿ ಕುರಿತು ಚರ್ಚಿಸಿದ ಸಭೆಯು ರೂ.2.00 ಲಕ್ಷದ ಮೇಲ್ಪಟ್ಟು ಮುಂಗಡವಾಗಿ ಪಾವತಿಸಲು ಅವಕಾಶ ಇರದ ಕಾರಣ ರೂ. 1,75,000.00 ಗಳನ್ನು ಈಗಾಗಲೇ ದಿನಾಂಕ 02.03.2022 ರಂದು ಪಾವತಿಸಿರುವ ಕ್ರಮವನ್ನು ಅನುಮೋದಿಸಿತು. |

8/4/22 08/4/22

| | | | |
|---|---|---|---|
| | | ಸಿಬ್ಬಂದಿ ವಿಭಾಗ | |
| 21 | 2021–22.ಸಾ.ಸಿಂ.03 ಸಿ.ವಿ–06 | ಶ್ರೀ ತಿಪ್ಪೇಶ್ ಹೆಚ್. ದ್ವಿ.ದ.ಸ. (ಹಂ.ಸಂ.ವೇ.ನೌ) ಇವರ ವಿರುದ್ಧ ದಾಖಲಾದ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಆದೇಶ ಹೊರಡಿಸುವ ಸಂಬಂಧ ದಿನಾಂಕ 08.03.2022ರಂದು ನಡೆದ ಡೀನರ ಸಮಿತಿ ಸಭೆಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ವರದಿ ಕುರಿತು. | ಸದರಿ ವಿಷಯದ ಕುರಿತು ಡೀನರ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿತು. |
| 22 | 2021–22.ಸಾ.ಸಿಂ.03 ಸಿ.ವಿ–07 | ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರು ತಮ್ಮ ಪತ್ರದಲ್ಲಿ ಶ್ರೀ ಸಂತೋಷ್ ಬಿ. ಅಕ್ಕಿ, ಕಂಪ್ಯೂಟರ್ ಪ್ರೋಗ್ರಾಮರ್, ಇವರು ಆಡಳಿತ ತರಬೇತಿ ಸಂಸ್ಥೆಯ ಬೆಳಗಾವಿ ವಿಭಾಗದ ಸೀನಿಯರ್ ಫ್ಯಾಕಲ್ಟಿ ಹುದ್ದೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಲು ಮನವಿ ಸಲ್ಲಿಸಿರುವುದರಿಂದ ವೇತನ ಪಾವತಿ ಸಂಬಂಧ ಸಹಮತಿ ನೀಡುವಂತೆ ಕೋರಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಕೆ.ಸಿ.ಎಸ್ ನಿಯಮ 446 ರನ್ವಯ ಶ್ರೀ ಸಂತೋಷ್ ಬಿ. ಅಕ್ಕಿ, ಕಂಪ್ಯೂಟರ್ ಪ್ರೋಗ್ರಾಮರ್, ಇವರನ್ನು ಆಡಳಿತ ತರಬೇತಿ ಸಂಸ್ಥೆಯ ಬೆಳಗಾವಿ ವಿಭಾಗದ ಸೀನಿಯರ್ ಫ್ಯಾಕಲ್ಟಿ ಹುದ್ದೆಯಲ್ಲಿ ನಿಯೋಜಿಸುವ ಸಂಬಂಧ ಮತ್ತು ವೇತನವನ್ನು ಸದರಿ ಸಂಸ್ಥೆಯವರೆ ಹೆಚ್.ಆರ್.ಎಂ.ಎಸ್ ಮುಖಾಂತರ ಪಾವತಿಸುವ ಹಾಗೂ ಎನ್.ಪಿ.ಎಸ್. ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು ಒಂದು ವರ್ಷದ ಅವಧಿಗೆ ನಿಯೋಜಿಸಲು ಸಭೆಯು ತೀರ್ಮಾನಿಸಿತು. |
| 23 | 2021–22.ಸಾ.ಸಿಂ.03 ಸಿ.ವಿ–08 | ಹಂಗಾಮಿ ಸಂಚಿತ ವೇತನ ನೌಕರರ ಸೇವೆಯನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಗ್ರೂಪ್ 'ಡಿ' ಹುದ್ದೆಗಳಿಗೆ ಎದುರಾಗಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಜವಾನರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಹೇಮ. ಬಿ., ಶ್ರೀಮತಿ ಮಂಜುಳ ಎಸ್. ನೌಕರರು ಇವರ ಸೇವೆಯನ್ನು ದಿನಾಂಕ 22.03.2022 ರಿಂದ ಮುಂದಿನ ಹನ್ನೊಂದು ತಿಂಗಳ ಅವಧಿಗೆ ಮುಂದುವರೆಸಲು ದಿನಾಂಕ 23.03.2022 ರಂದು ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 24 | 2021–22.ಸಾ.ಸಿಂ.03 ಸಿ.ವಿ–09 | ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಘಟಕಕ್ಕೆ ನೇಮಕಗೊಂಡಿರುವ ನೌಕರರ ಸೇವೆಯನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿವಿಧ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹನ್ನೊಂದು ತಿಂಗಳ ಅವಧಿಯು ಮುಕ್ತಾಯಗೊಂಡು ಒಂದು ದಿನದ ಸೇವೆ ಭಂಗಗೊಳಿಸಿ ಮುಂದುವರೆಸುವ ಸಂಬಂಧ ಅಂತಹ ಸಿಬ್ಬಂದಿಗಳ ಕಾರ್ಯನಿರ್ವಹಣೆಯ ಪ್ರಗತಿ ವರದಿಯನ್ನು ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು. |

| ಖರೀದಿ ಕೋಶ | | | |
|---|---|---|---|
| 25 | 2021-22.ಸಾ.ಸಿಂ.03 ಖ.ಕೋ-08 | ತುಮಕೂರು ವಿಶ್ವವಿದ್ಯಾನಿಲಯಕ್ಕೆ VGST ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯಲು M/s. Scientek Services, Bangalore ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯಕ್ಕೆ VGST ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯಲು M/s. Scientek Services, Bangalore ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಆದೇಶ ನೀಡಿರುವ ಕ್ರಮವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. ಮುಂದುವರೆದು ಸದರಿ ಸಂಸ್ಥೆಯವರು ಬಿಲ್ಲನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 26 | 2021-22.ಸಾ.ಸಿಂ.03 ಖ.ಕೋ-09 | ಸ್ನಾತಕೋತ್ತರ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಸದರಿ ವಿಭಾಗದ ಮುಖ್ಯಸ್ಥರೊಂದಿಗೆ ಚರ್ಚಿಸಿ, ನಂತರ ಅಗತ್ಯ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ತೀರ್ಮಾನಿಸಲಾಯಿತು. |
| 27 | 2021-22.ಸಾ.ಸಿಂ.03 ಖ.ಕೋ-10 | ತುಮಕೂರು ವಿಶ್ವವಿದ್ಯಾನಿಲಯಕ್ಕೆ VGST ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯಲು M/s SoftTech, Bangalore ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯಕ್ಕೆ VGST ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯಲು M/s SoftTech, Bangalore ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಆದೇಶ ನೀಡಿರುವ ಕ್ರಮವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. ಮುಂದುವರೆದು ಸದರಿ ಸಂಸ್ಥೆಯವರು ಬಿಲ್ಲನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಪರಿಶೀಲಿಸಿ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸಭೆಯು ತೀರ್ಮಾನಿಸಿತು. |
| 28 | 2021-22.ಸಾ.ಸಿಂ.03 ಖ.ಕೋ-11 | ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ತಂತ್ರಜ್ಞಾನ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸುವ ಕುರಿತು. | ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ತಂತ್ರಜ್ಞಾನ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸುವ ಕುರಿತು ಚರ್ಚಿಸಿದ ಸಭೆಯು ದಿನಾಂಕ07.03.2022ರ ಖರೀದಿ ಸಮಿತಿಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಹಾಗೂ ಸದರಿ ಉಪಕರಣಗಳ ಬಳಕೆಗೆ ಅಗತ್ಯವಾದ Lab Tables stools ಗಳನ್ನು ಖರೀದಿಸುವ ಕುರಿತು ಪ್ರಸ್ತುತ ನಿಗದಿಪಡಿಸಿರುವ |

| | | | |
|---|---|---|---|
| | | | ಅಂದಾಜು ಆಯ-ವ್ಯಯ ಪಟ್ಟಿಯಲ್ಲಿ ನಿಗದಿಪಡಿಸಿರುವ ಅನುದಾನದ ಮಿತಿಗೊಳಪಟ್ಟು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ & ಅಭಿವೃದ್ಧಿ ವಿಭಾಗ** | | | |
| 29 | 2021-22.ಸಾ.ಸಿಂ.03 ಸಾ&ಅ-01 | ಸೆರಾ ಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯ, ಬೈಲಕುಪ್ಪೆ ಮತ್ತು ತುಮಕೂರು ವಿಶ್ವವಿದ್ಯಾನಿಲಯದೊಂದಿಗೆ ದಿನಾಂಕ 26.11.2012 ರಂದು ಮಾಡಿಕೊಂಡಿರುವ ಒಡಂಬಡಿಕೆಯನ್ನು ನವೀಕರಿಸುವ ಕುರಿತು. | ಸದರಿ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸೆರಾ ಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯ, ಬೈಲಕುಪ್ಪೆ ಇವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯಿಂದ ವಿಶ್ವವಿದ್ಯಾನಿಲಯದ ಬೋಧಕ ಮತ್ತು ಸಂಶೋಧನಾರ್ಥಿಗಳಿಗೆ ವಿವಿಧ ಶೈಕ್ಷಣಿಕ ಸಂಶೋಧನಾಭಿವೃದ್ಧಿಗೆ ಅನುಕೂಲವಾಗುವುದರಿಂದ ಒಡಂಬಡಿಕೆಯಲ್ಲಿರುವ ಹತ್ತು ವರ್ಷಗಳ ಬದಲಿಗೆ ಐದು ವರ್ಷಗಳ ಅವಧಿಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಸದರಿ ಸಂಸ್ಥೆಯವರೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮತಿಸಿತು. |
| 30 | 2021-22.ಸಾ.ಸಿಂ.03 ಸಾ&ಅ-02 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ಐ.ಟಿ. ಕನ್ಸಲ್ಟೆಂಟಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಂಜುನಾಥ್ ಕೆ.ಜೆ ಇವರ ಸೇವೆಯನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪರೀಕ್ಷಾಂಗ ವಿಭಾಗದಲ್ಲಿ ಐ.ಟಿ. ಕನ್ಸಲ್ಟೆಂಟಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಂಜುನಾಥ್ ಕೆ.ಜೆ ಇವರ ಸೇವೆಯನ್ನು ದಿನಾಂಕ 02.03.2022ರಿಂದ ಅನ್ವಯವಾಗುವಂತೆ ಪ್ರಸ್ತುತ ಇರುವ ವೇತನದಡಿಯಲ್ಲಿಯೇ ಮುಂದಿನ ಹನ್ನೊಂದು ತಿಂಗಳಿಗೆ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| 31 | 2021-22.ಸಾ.ಸಿಂ.03 ಸಾ&ಅ-03 | ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ. | ಸರ್ಕಾರದ ಪತ್ರ ಸಂಖ್ಯೆ ಇಡಿ 92 ಯುಎನ್ಇ 2022 ದಿನಾಂಕ 22.03.2022ರಲ್ಲಿ ವಿಶ್ವವಿದ್ಯಾನಿಲಯದಲ್ಲಿ Massive Online Open Course (MOOC) ಮತ್ತು FM Community Radio Station ಕಾರ್ಯಕ್ರಮವನ್ನು ಯುಜಿಸಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಅನುಷ್ಠಾನಗೊಳಿಸುವಂತೆ ತಿಳಿಸಿರುವ ಕುರಿತು ಚರ್ಚಿಸಿದ ಸಭೆಯು, ಪ್ರಸ್ತುತ ತುಮಕೂರು ವಿಶ್ವವಿದ್ಯಾನಿಲಯವು ಯು.ಜಿ.ಸಿ. ಯ ಅಧಿಸೂಚನೆ ದಿನಾಂಕ 04.07.2018 ರಂದು ಹೊರಡಿಸಿರುವ ಮಾರ್ಗಸೂಚಿಗಳಿಯಲ್ಲಿ NAAC ಇಂದ A+ ಮಾನ್ಯತೆ ಹಾಗೂ ಅಂಕಗಳನ್ನು ನಿಗದಿಪಡಿಸಿರುತ್ತದೆ. ಪ್ರಸ್ತುತ ತುಮಕೂರು ವಿ.ವಿಯು NAAC ಇಂದ B+ ಮಾನ್ಯತೆಯನ್ನು ಹೊಂದಿರುವುದರಿಂದ ಯು.ಜಿ.ಸಿ. ಮಾರ್ಗಸೂಚಿಯಂತೆ ನಿಗದಿತ ಮಾನದಂಡವನ್ನು ಹೊಂದಿರದ ಕಾರಣ |

| | | | |
|---|---|---|---|
| | | | ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಕಾಶ ಇರುವುದಿಲ್ಲ ಎಂದು ನಿರ್ಣಯಿಸಿತು.<br>FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು ಪ್ರಸ್ತುತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದಿಂದ ಪ್ರಸ್ತಾವನೆ ಪಡೆದು ಮುಂದಿನ ಸಿಂಡಿಕೇಟ್‌ಗೆ ಮಂಡಿಸಿ ಕ್ರಮ ಕೈಗೊಳ್ಳುವಂತೆ ಸರ್ವಾನುಮತದಿಂದ ತೀರ್ಮಾನಿಸಿತು. |
| 32 | 2021-22.ಸಾ.ಸಿಂ.03<br>ಸಾ&ಅ-04 | ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಭಾಹ್ಯ ತಜ್ಞರು/ ಸಂದರ್ಶಕ ಪ್ರಾಧ್ಯಾಪಕರನ್ನು ಮಾಸಿಕ ಗೌರವ ಸಂಭಾವನೆಯಡಿಯಲ್ಲಿ ಆಹ್ವಾನಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಮಾಸಿಕ ಗೌರವ ಸಂಭಾವನೆಯ ವಿವರವನ್ನು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು ಸದರಿ ವಿಷಯವನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸಭೆಯು ತೀರ್ಮಾನಿಸಿತು. |
| 33 | 2021-22.ಸಾ.ಸಿಂ.03<br>ಸಾ&ಅ-05 | 2022ನೇ ಸಾಲಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ಆಯೋಜಿಸುವ ಸಂಬಂಧ ಸಮಿತಿಯು ಸಲ್ಲಿಸಿರುವ ವರದಿ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ 18ನೇ ಸಂಸ್ಥಾಪನಾ ದಿನಾಚರಣೆಯನ್ನು ದಿನಾಂಕ 25.04.2022 ರಿಂದ ದಿನಾಂಕ 28.04.2022ರೊಳಗೆ ನಡೆಸುವಂತೆ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |
| | | **ಪರೀಕ್ಷಾ ವಿಭಾಗ** | |
| 34 | 2021-22.ಸಾ.ಸಿಂ.03<br>ಪ.ವಿ-03 | ವಿವಿಧ ಸ್ನಾತಕ, ಸ್ನಾತಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದು Double the Duration of the course ಪೂರೈಸಿರುವ ವಿದ್ಯಾರ್ಥಿಗಳಿಗೆ 2021-22ರ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡುವ ಕುರಿತು. | ಪ್ರಸ್ತುತ ಈಗಾಗಲೇ ಸ್ನಾತಕ, ಸ್ನಾತಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ Double the Duration of the course ಅವಧಿ ಮುಕ್ತಾಯಗೊಂಡಿರುವ ವಿದ್ಯಾರ್ಥಿಗಳಿಗೆ 2021-22ನೇ ಶೈಕ್ಷಣಿಕ ಸಾಲಿಗೆ ಪರೀಕ್ಷೆ ತೆಗೆದುಕೊಳ್ಳಲು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಮುಂದುವರೆದು, ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಲು ಶ್ರೀ ಪ್ರಸನ್ನಕುಮಾರ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್., ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಮತ್ತು ಶ್ರೀಮತಿ ಲತಾ, ಶ್ರೀ ರಾಜು, ಕುಲಸಚಿವರು (ಪರೀಕ್ಷಾಂಗ), ಸಂಚಾಲಕರು ಇವರುಗಳನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸುವಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |

| | | | |
|---|---|---|---|
| ಕ್ರೀಡಾ ವಿಭಾಗ | | | |
| 35 | 2021–22.ಸಾ.ಸಿಂ.03<br>ಕ್ರೀ.ವಿ.–03 | 2021–22ನೇ ಸಾಲಿನ ಮೂರನೇ ಸಲಹಾ ಸಮಿತಿ ಸಭೆಯ ನಡಾವಳಿಗಳ ಕುರಿತು. | 2021–22ನೇ ಸಾಲಿನ ಮೂರನೇ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಕ್ರೀಡಾ ಸಲಹಾ ಸಮಿತಿಯ ನಡಾವಳಿಯನ್ನು ಅನುಮೋದಿಸಿತು. |
| 36 | 2021–22.ಸಾ.ಸಿಂ.03<br>ಕ್ರೀ.ವಿ.–04 | 2021–22ನೇ ಸಾಲಿನ ದಕ್ಷಿಣ ವಲಯ / ಅಂತರ ವಿಶ್ವವಿದ್ಯಾನಿಲಯ ಕ್ರೀಢಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಮುಂಗಡ ಹಣ ಮಂಜೂರಾತಿ ಸ್ಥಿರೀಕರಣ ಕುರಿತು. | 2021–22ನೇ ಸಾಲಿನ ದಕ್ಷಿಣ ವಲಯ/ ಅಂತರ ವಿಶ್ವವಿದ್ಯಾನಿಲಯ ಕ್ರೀಡಾ ಸ್ಪರ್ಧೆಗಳ ತರಬೇತಿ ಸಂಬಂಧ ತರಬೇತುದಾರರು/ ವ್ಯವಸ್ಥಾಪರಿಗೆ ಆಗಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಹಾಗೂ ಇತರೆಗಳಿಗೆ ವೆಚ್ಚವಾಗಿರುವ ರೂ.1,90,000.00 ಗಳನ್ನು ಮುಂಗಡವಾಗಿ ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮತಿಸಿ ಸ್ಥಿರೀಕರಿಸಿತು. |
| ಸಿಬ್ಬಂದಿ ವಿಭಾಗ | | | |
| 37 | 2021–22.ಸಾ.ಸಿಂ.03<br>ಸಿ.ವಿ–10 | ಶ್ರೀ ಮುನಿವೀರಪ್ಪ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಅಂಗೀಕರಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಮುನಿವೀರಪ್ಪ ಮುಖ್ಯ ಲೆಕ್ಕಾಧಿಕಾರಿಗಳು ಇವರ ವೇತನ ಪ್ರಮಾಣ ಪತ್ರ/ ರಜಾ ಲೆಕ್ಕದ ವರದಿ ಸ್ವೀಕೃತಗೊಂಡಿರದ ಕಾರಣ ಹಾಗೂ ದಿನಾಂಕ:21.03.2022 ರಿಂದ ದಿನಾಂಕ: 21.04.2022ರ ವರೆಗೆ ಅನಾರೋಗ್ಯದ ನಿಮಿತ್ತ ಗಳಿಕೆ ರಜೆ ಮನವಿ ಸಲ್ಲಿಸಿರುವುದನ್ನು ಗಮನಿಸಿದ ಸಭೆಯು ವಿಶ್ವವಿದ್ಯಾನಿಲಯವು ಆಡಳಿತಾತ್ಮಕ ಹಿತದೃಷ್ಟಿಯಿಂದ ತಾತ್ಕಲಿಕವಾಗಿ ಪ್ರೊ. ಪಿ ಪರಮಶಿವಯ್ಯ ಇವರನ್ನು ದಿನಾಂಕ 28.03.2022ರಂದು ನೇಮಿಸಿ ಆದೇಶಿಸಿರುವ ಕ್ರಮನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.<br>ಮುಂದುವರೆದು, ಶ್ರೀ ಮುನಿವೀರಪ್ಪ ಇವರನ್ನು ಮಾತೃ ಇಲಾಖೆಗೆ ಹಿಂದಿರುಗಿಸಲು ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |
| 38 | 2021–22.ಸಾ.ಸಿಂ.03<br>ಸಿ.ವಿ–11 | ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ (CDC) ವಿಭಾಗಕ್ಕೆ ನಿರ್ದೇಶಕರನ್ನು ನೇಮಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ (CDC) ವಿಭಾಗಕ್ಕೆ ಡಾ. ಕೇಶವ ಇವರನ್ನು ನಿರ್ದೇಶಕರನ್ನಾಗಿ ನೇಮಿಸಿ ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |

| | | | |
|---|---|---|---|
| 39 | 2021–22.ಸಾ.ಸಿಂ.03 ಸಿ.ವಿ–12 | ದಿನಾಂಕ 30.11.2021 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ವಿಶ್ವವಿದ್ಯಾನಿಲಯದ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವ ಸಂಬಂಧ ಸರ್ಕಾರದಿಂದ ಸ್ವೀಕೃತಗೊಂಡಿರುವ ನೋಟೀಸ್ ಕುರಿತು. | ಸದರಿ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಖಾಯಂ ಬೋಧಕೇತರ ಸಿಬ್ಬಂದಿಗಳ ಪದೋನ್ನತಿಯಲ್ಲಿ ಕೆ.ಸಿ.ಎಸ್ ನಿಯಮಾವಳಿಗೆ ಅನುಗುಣವಾಗಿ ಪರಿನಿಯಮಾವಳಿಯನ್ನು ರಚಿಸಿ, ಮಾನ್ಯ ಘನತೆವೆತ್ತ ಕುಲಾಧಿಪತಿಯವರ ಅನುಮೋದನೆ ಪಡೆದಿರುತ್ತದೆ. ಖಾಯಂ ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಸಂಬಂಧ ದಿನಾಂಕ:30.05.2020ರ ನೇಮಕಾತಿ ಮಂಡಳಿಯ ಶಿಫಾರಸ್ಸಿನನ್ವಯ ದಿನಾಂಕ:28.08.2020ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ದಿನಾಂಕ 22.10.2020 ರಂದು ಸರ್ಕಾರವು ವಿಶ್ವವಿದ್ಯಾನಿಲಯದ ಹಂತದಲ್ಲಿ ಕ್ರಮವಹಿಸುವಂತೆ ವಿಶ್ವವಿದ್ಯಾನಿಲಯಕ್ಕೆ ತಿಳಿಸಿರುತ್ತದೆ.<br>ಸದರಿ ಸರ್ಕಾರದ ಪತ್ರವನ್ನು ದಿನಾಂಕ:07.11.2020ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು, ಸಭೆಯ ನಿರ್ಣಯದಂತೆ ಪದೋನ್ನತಿ ಸಂಬಂಧ ಇಲಾಖಾ ಪರೀಕ್ಷೆಗಳನ್ನು ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ.<br>ನಂತರ, ಕೆ.ಎಸ್.ಯು 2000 ಅಧಿನಿಯಮದ ಪ್ರಕಾರ ಮತ್ತು ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯನ್ವಯ ಅರ್ಹ ಇರುವ ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಕುರಿತು ದಿನಾಂಕ: 16.11.2021ರಂದು ನಡೆದ ನೇಮಕಾತಿ ಮಂಡಳಿಯ ವರದಿಯನ್ನು ಮುಚ್ಚಿದ ಲಕೋಟೆಯೊಂದಿಗೆ ದಿನಾಂಕ: 30.11.2021ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು.<br>ಪದೋನ್ನತಿ ಸಂಬಂಧದ ಎಲ್ಲಾ ಪ್ರಕ್ರಿಯೆಗಳು ನಿಯಮಗಳಿಗೆ ಅನುಗುಣವಾಗಿ ಇರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ನೇಮಕಾತಿ ಮಂಡಳಿಯ ಶಿಫಾರಸ್ಸಿನನ್ವಯ ಅರ್ಹ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಸರ್ವಾನುಮತದಿಂದ ತೀರ್ಮಾನಿಸಿರುವುದು ಕಾನೂನು ರೀತಿಯಲ್ಲಿ ನಿಯಮಾನುಸಾರ ಕ್ರಮಬದ್ಧವಾಗಿರುತ್ತದೆ. ದಿನಾಂಕ:30.03.2022ರ ಸರ್ಕಾರದ ನೋಟೀಸ್‌ನಲ್ಲಿ ತಿಳಿಸಿರುವಂತೆ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗಳಲ್ಲಿ ಪ್ರಕರಣ 5 ಅನ್ನು ಕೈಬಿಡಲು ಮತ್ತು ಪ್ರಕರಣ 23 (a) ಅನ್ನು ತಿದ್ದುಪಡಿಸುವಂತೆ |

| | | | |
|---|---|---|---|
| | | | ಸರ್ಕಾರಕ್ಕೆ ಕೋರಲು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದು, ಸದರಿ ಅಂಶಗಳು ಸರ್ಕಾರದ ಆದೇಶಗಳ ಅನುಸಾರ ರಚಿತಗೊಂಡ ಪರಿನಿಯಮಾವಳಿಯಾಗಿದ್ದು ಹಾಗೂ ಮಾನ್ಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಹಿನ್ನೆಲೆಯಲ್ಲಿ ಸದರಿ ಅಂಶಗಳನ್ನು ಪ್ರಸ್ತುತ ಅವಧಿಯಲ್ಲಿ ಕೈಬಿಡುವ ಹಾಗೂ ತಿದ್ದುಪಡಿ ಮಾಡುವ ಸಂಭವ ಇರದ ಕಾರಣ, ಪದೋನ್ನತಿಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವು ಸಮರ್ಪಕವಾಗಿರುತ್ತದೆ. ಸದರಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರದ ಅವಗಾಹನೆಗೆ ತರುವಂತೆ ಸರ್ವಾನುಮತದಿಂದ ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ & ಅಭಿವೃದ್ಧಿ ವಿಭಾಗ** | | | |
| 40 | 2021-22.ಸಾ.ಸಿಂ.03 ಸಾ&ಅ-06 | ವಿಶ್ವವಿದ್ಯಾನಿಲಯದ ಸಂಶೋಧನಾ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕರ ಸೇವೆಯನ್ನು ಮುಂದುವರೆಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿವಿಧ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹನ್ನೊಂದು ತಿಂಗಳ ಅವಧಿಯು ಮುಕ್ತಾಯಗೊಂಡು ಒಂದು ದಿನದ ಸೇವೆ ಭಂಗಗೊಳಿಸಿ ಮುಂದುವರೆಸುವ ಸಂಬಂಧ ಅಂತಹ ಸಿಬ್ಬಂದಿಗಳ ಕಾರ್ಯನಿರ್ವಹಣೆಯ ಪ್ರಗತಿ ವರದಿಯನ್ನು ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| ಶ್ರೀ ಶ್ರೀನಿವಾಸ ಆರ್.ಕೆ. | [signature] | ಶ್ರೀ ಪ್ರಸನ್ನಕುಮಾರ್ | [signature] |
| ಪ್ರೊ. ಹೆಚ್.ಎಸ್. ಶಿವಯೋಗಿ | [signature] | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ | [signature] |
| ಡಾ. ಟಿ. ವೆಂಕಟಾಚಲಯ್ಯ | [signature] | ಶ್ರೀ ರಾಜು | [signature] |
| ಡಾ. ಕೆ ಸಿ ಜಯಸ್ವಾಮಿ | [signature] | ಶ್ರೀ ಟಿ.ಡಿ. ವಿನಯ್ | |
| ಶ್ರೀಮತಿ ಲತಾ ಬಿ.ಎಸ್ | [signature] | ಕುಲಸಚಿವರು (ಪರೀಕ್ಷಾಂಗ) | [signature] |
| ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | [signature] | ಹಣಕಾಸು ಅಧಿಕಾರಿಗಳು | [signature] |

[signature] 8/4/22
ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

[signature] 8/4/2022
ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.